15.		ಚೆನ್ನರಾಯಪಟ್ಟಣ
16.	ಮೈಸೂರು	ಕೆ.ಆರ್. ನಗರ
17.	ಬೆಳಗಾಂ	ಗೋಕಾಕ್
18.	ಚಾಮರಾಜನಗರ	ಗುಂಡ್ಲು ಪೇಟೆ
19.	ಬಾಗಲಕೋಟೆ	ಜಮಖಂಡಿ
20.		ಮುಧೋಳ್
21.	ರಾಯಚೂರು	ಲಿಂಗಸಗೂರು (ಒಳಾಂಗಣ ಕ್ರೀಡಾಂಗಣ)
22.	ಮಂಡ್ಯ	ಮದ್ದೂರು
23.	ಚಿಕ್ಕಮಗಳೂರು	ಎನ್.ಆರ್. ಪುರ
24.		ಮೂಡಿಗೆರೆ
25.		ಕಡೂರು
26.	ಗುಲ್ಬರ್ಗಾ	ಜೇವರ್ಗಿ
27.	ಬಳ್ಳಾರಿ	ಸಿರಗುಪ್ಪ
28.	ಉತ್ತರ ಕನ್ನಡ ಜಿಲ್ಲೆ	ಮುಂಡಗೋಡು
29.		ಯಲ್ಲಾಪುರ

250 (601) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು):– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬೀದರ್–ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿನ ಮಸ್ಕಿ ಹತ್ತಿರದ ಸೇತುವೆ ಕೊಚ್ಚಿಕೊಂಡು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು;

3) ಈ ಸೇತುವೆಯನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮಿಸಲು (ಹೊಸ ಸೇತುವೆ ಸರ್ಕಾರ ಕ್ರಮ ಜರುಗಿಸಿದೆಯೆ, ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

1) ಬಂದಿದೆ.

2) ರಸ್ತೆಗೆ ಸಂಪರ್ಕ ಕಲ್ಪಿಸಲು ನೈಸರ್ಗಿಕ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಕೊಚ್ಚಿ ಹೋದ ಭಾಗದ ದುರಸ್ಥಿಯನ್ನು ದಿನಾಂಕ : 26-6-2007 ರಿಂದ ಯಧುದ್ಧೋಪಾದಿಯಲ್ಲಿ ಪ್ರಾರಂಭಿಸಿ, ಈಗಾಗಲೇ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿ ವಾಹನ ಸಂಚಾರಕ್ಕೆ ಅನುಕೂಲ ಮಾಡಲಾಗಿದೆ.

3) ಹೊಸ ಸೇತುವೆ ನಿರ್ಮಾಣದ ಪ್ರಸ್ತಾವನೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ಮಿಸಲು ಪರಿಶೀಲಿಸಲಾಗುತ್ತಿದ್ದು, ಅನುದಾನದ ಲಭ್ಯತೆ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲು ಪರಿಗಣಿಸಲಾಗುವುದು.

352 (152) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ:-
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋದಿಂದ ರಾಜ್ಯದ ವಿವಿಧ ಭಾಗಗಳಿಗೆ ಪ್ರತಿ ದಿನ ಸಂಚರಿಸುವ ಬಸ್‌ಗಳ ಸಂಖ್ಯೆ ಎಷ್ಟು;

ಆ) ಬಿಜಾಪುರ ಬಸ್ ಡಿಪೋದಲ್ಲಿ ಹಲವಾರು ಬಸ್‌ಗಳಿಗೆ ಟೈರ್‌ಗಳನ್ನು ಬದಲಾಯಿಸಬೇಕಾಗಿದ್ದು ಟೈರುಗಳ ಕೊರತೆಯಿಂದ ಬಸ್ ಸಂಚಾರಗಳನ್ನು ರದ್ದು ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಕೂಡಲೇ ಅಗತ್ಯ ಪ್ರಮಾಣದಲ್ಲಿ ಟೈರು ಇತ್ಯಾದಿ ಉಪಕರಣಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) 218 ಬಸ್ಸುಗಳು.

ಆ) ಹೌದು.

ಇ) ಏಪ್ರಿಲ್ 2007 ರಿಂದ ಬಿಜಾಪುರ ಘಟಕಗಳಿಗೆ 440 ಹೊಸ ಟೈರುಗಳ ಹಾಗೂ 1129 ರೀಸೋಲ್ ಟಯರುಗಳನ್ನು ಸರಬರಾಜು ಮಾಡಲಾಗಿದೆ.